ಆರ್ ಪಿ ಎಫ್, ರಾಜ್ಯ ಗುಪ್ತವಾರ್ತೆ, ಭಯೋತ್ಪಾದಕ ನಿಗ್ರಹ ದಳದ ಮುಖ್ಯಸ್ಥರನ್ನು ಒಳಗೊಂಡಿರುವ ಸಬ್ಸಿಡಿಯರಿ ಮಲ್ಟಿ ಏಜೆನ್ಸಿ ಸೆಂಟರ್‌ನ (SMAC) ಸಭೆಯನ್ನು ನಡೆಸುತ್ತಿದ್ದು, ರಾಜ್ಯದ ಭದ್ರತೆ ಬಗ್ಗೆ ಚರ್ಚಿಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಭದ್ರತೆ ವಿಷಯದಲ್ಲಿ ಗುಪ್ತಚರ ವಿಭಾಗದ ಮಾಹಿತಿ ವಿನಿಮಯ ಮಾಡಿಕೊಂಡು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ

1) ವಿಧಾನಸೌಧ, ವಿಕಾಸಸೌಧಗಳ ಭದ್ರತೆ ಬಗ್ಗೆ ಡಿ ಸಿ ಪಿ ರವರ ಹುದ್ದೆಯನ್ನು ಸೃಜಿಸಿ, ಭದ್ರತೆಯನ್ನು ಒದಗಿಸಲಾಗಿದೆ

2) ಕೇಂದ್ರ ಗುಪ್ತಚರ ದಳ/ಅಂತರರಾಜ್ಯ ಗುಪ್ತಚಾರ ದಳದೊಂದಿಗೆ ನಿಕಟ ಸಂಪರ್ಕ ಇಟ್ಟಿದ್ದು, ಮಾಹಿತಿ ವಿನಿಮಯ ಮಾಡಿಕೊಳ್ಳಲಾಗುತ್ತಿದೆ, ಅಪರಿಚಿತರಿಗೆ ಮನೆಗಳನ್ನು ಬಾಡಿಗೆಗೆ ನೀಡುವಾಗ ಮತ್ತು ಹಳೆ ವಾಹನಗಳನ್ನು ಮಾರಾಟ ಮಾಡುವಾಗ ಅಂತಹ ವ್ಯಕ್ತಿಗಳ ಪೂರ್ಣ ಮಾಹಿತಿಯನ್ನು ಪಡೆಯುವಂತೆ ಸ್ಥಳೀಯ ಪೊಲೀಸರಿಗೆ ಸೂಚಿಸಲಾಗಿದೆ ಈ ಬಗ್ಗೆ ಮಾಧ್ಯಮಗಳಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗುತ್ತಿದೆ

7) ಬೆಂಗಳೂರು ನಗರವು ಐಟಿ/ಬಿಟಿ ಕ್ಷೇತ್ರದಲ್ಲಿ ವಿಶ್ವದ ಗಮನ ಸೆಳೆದಿದ್ದು ಉದ್ಯೋಗಾವಕಾಶಕ್ಕಾಗಿ ಹಾಗೂ ವ್ಯಾಪಾರಕ್ಕಾಗಿ ಬೆಂಗಳೂರಿಗೆ ಬಂದು ನೆಲೆಸಿ, ಉಗ್ರಗಾಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆಗಳಿರುತ್ತದೆ ಇವರುಗಳು ಸ್ಥಳೀಯರೊಂದಿಗೆ ಬೆರೆತು ಅವರ ಅಮಾಯಕತೆಯನ್ನು ಬಳಿಸಿಕೊಂಡು ಉಗ್ರಗಾಮಿ ಕಾರ್ಯಚಟುವಟಿಕೆಗಳನ್ನು ನಡೆಸಿರುವ ಪ್ರಸಂಗಗಳು ಬೆಳಕಿಗೆ ಬಂದಿವೆ

8) ನಿಗಾ ಇಡಲಾಗಿದೆ

437 **ಶ್ರೀ ಸಿದ್ದು ಸಾವದಿ (ಜಮಖಂಡಿ)** ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಾ ಮಾಸಾಶನ ಪಡೆಯಲು ಇರುವ ನಿಯಮಾವಳಿಗಳಾವುವು,

ಆ) ಜಮಖಂಡಿ ತಾಲ್ಲೂಕಿನಲ್ಲಿ ಕಲೆಯಲ್ಲಿ ಮಾಸಾಶನ (ಗೌರವಧನ) ಪಡೆಯುವವರ ಸಂಖ್ಯೆ ಎಷ್ಟು ಹಾಗೂ ಎಂದಿನಿಂದ ಮತ್ತು ಯಾವ ಕಲೆಗಾಗಿ ಮಾಸಾಶನ ನೀಡಲಾಗುತ್ತಿದೆ,

ಇ) ಜಮಖಂಡಿ ತಾಲ್ಲೂಕಿನಲ್ಲಿ ಮಾಸಾಶನ ನಲುವಾಗಿ ಎಷ್ಟು ಅರ್ಜಿಗಳು ಬಾಕಿ ಇವೆ ಹಾಗೂ ಅವುಗಳಿಗೆಲ್ಲಾ ಯಾವಾಗ ಮಂಜೂರಾತಿ ಕೊಡಲಾಗುವುದು,

ಈ) ದಿನಾಂಕ 1–4–2004ರಿಂದ ಇಲ್ಲಿಯ ವರೆವಿಗೂ ಪ್ರತಿ ವರ್ಷ ರಾಜ್ಯದಲ್ಲಿ ಎಷ್ಟು ಜನರಿಗೆ ಮಾಸಾಶನ ಮಂಜೂರು ಮಾಡಲಾಗಿದೆ, (ತಾಲ್ಲೂಕುವಾರು ಮಾಹಿತಿ ಒದಗಿಸುವುದು),

ಉ) ಅನರ್ಹ ಕಲಾವಿದರಿಗೆ ಮಾಸಾಶನ ಬರುತ್ತಿದ್ದು, ನಿಜವಾದ ಕಲಾವಿದರು ಅವಕಾಶದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಊ) ಹಾಗಿದ್ದಲ್ಲಿ ಅಂತಹವರ ಸಂಖ್ಯೆ ಎಷ್ಟು ಹಾಗು ಅವರ ವಿರುದ್ಧ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಎಸ್ ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಕಲಾವಿದರಿಗೆ 58 ವರ್ಷ ವಯಸ್ಸಾಗಿರಬೇಕು ಕನಿಷ್ಠ 25 ವರ್ಷಗಳ ಕಲಾಸೇವೆ ಮಾಡಿರಬೇಕು ಹಾಗೂ ವಾರ್ಷಿಕ ಆದಾಯ ಮಿತಿ 3,6000 00 ಮೀರಿರಬಾರದು, ಅಂಗವಿಕಲ ಕಲಾವಿದರಾಗಿದ್ದಲ್ಲಿ 49 ವರ್ಷ ವಯಸ್ಸಾಗಿರಬೇಕು ಹಾಗೂ ಕನಿಷ್ಠ 20 ವರ್ಷಗಳ ಕಲಾಸೇವೆ ಮಾಡಿರಬೇಕು

ಆ) ಅ) ಜಮಖಂಡಿ ತಾಲ್ಲೂಕಿನಲ್ಲಿ ಮಾಸಾಶನ ಪಡೆಯುತ್ತಿರುವವರ ಸಂಖ್ಯೆ 332

ಆ) ದಿನಾಂಕ 4 2 1975ರಿಂದ ಮಾಸಾಶನ ಮಂಜೂರು ಮಾಡಲಾಗುತ್ತಿದೆ

ಇ) ಜಾನಪದ, ಯಕ್ಷಗಾನ, ಸಂಗೀತ ನೃತ್ಯ ಲಲಿತ ಶಿಲ್ಪಕಲೆ ಸಾಹಿತ್ಯ, ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹನೀಯರಿಗೆ ಮಾಸಾಶನ ನೀಡಲಾಗುತ್ತಿದೆ

ಇ) ಅ) ಜಮಖಂಡಿ ತಾಲ್ಲೂಕಿಗೆ ಸಂಬಂಧಪಟ್ಟಂತೆ 144 ಅರ್ಜಿಗಳು ಬಾಕಿ ಇವೆ

ಆ) ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಅರ್ಹ ಕಲಾವಿದರನ್ನು ಮತ್ತೊಮ್ಮೆ ಪರಿಶೀಲಿಸಿ ಆಯ್ಕೆ ಮಾಡಲು ವಿವಿಧ ಕಲೆಗಳಿಗೆ

ನಂಬಂಧಿಸಿದಂತೆ ಸಮಿತಿಗಳನ್ನು ರಚಿಸಿದ್ದು, ಈ ಉಪ ಸಮಿತಿಗಳು ನಂದರ್ಶನ ಪ್ರಕ್ರಿಯೆ ಪ್ರಾರಂಭಿಸಿದ್ದು, ಅರ್ಹ ಕಲಾವಿದರ ಪಟ್ಟಿಯನ್ನು ನೀಡಿದ ಕೂಡಲೇ ಮಾಸಾಶನವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು

ಈ) ದಿನಾಂಕ 1 4 2004 ರಿಂದ ಮಾಸಾಶನ ಮಂಜೂರಾಗಿರುವುದಿಲ್ಲ ಆಯ್ಕೆ ಸಮಿತಿಯನ್ನು ರಚಿಸಿದ್ದು, ಆಯ್ಕೆ ಪ್ರಕ್ರಿಯೆ ಆರಂಭವಾಗಿರುತ್ತದೆ

ಉ) ಅ ಹೌದು ಅನರ್ಹ ಕಲಾವಿದರೆಂದು ತಿಳಿದು ಬಂದಂತಹವರ ಬಗ್ಗೆ ವಿಚಾರಣೆನಡೆಸಿ ಅವರಿಗೆ ಮಾಸಾಶನವನ್ನು ರದ್ದುಪಡಿಸಲಾಗಿದೆ

ಊ) ಅನರ್ಹ ಕಲಾವಿದರೆಂದು ತನಿಖೆಯಿಂದ ದೃಢಪಡುವಂತ ಹಾಸನ ಜಿಲ್ಲೆಗೆಸಂಬಂಧಿಸಿದಂತೆ ನಾಲ್ಕು ಜನರಿಗೆ (4) ಹಾಗೂ ಬಿಜಾಪುರ ಜಿಲ್ಲೆಯ ಒಬ್ಬರಿಗೆ (1) ಮಾಸಾಶನ ಮಂಜೂರಾತಿ ಸೌಲಭ್ಯ ರದ್ದುಪಡಿನಲಾಗಿದೆ

438 **ಶ್ರೀ ಸಿದ್ದು ಸಾವದಿ (ಜಮಖಂಡಿ)** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ, ರಬಕವಿ, ಬನಹಟ್ಟಿ ಮತ್ತು ತೇರದಾಳ ನಗರ ಸಭೆಗಳ ನೀರು ವಿತರಣಾ ವೈಪುಗಳ ಜೋಡಣೆ ಗಳನ್ನು ಯಾವಾಗ ಮಾಡಲಾಗಿದೆ, (ವಾರ್ಡ್‌ವಾರು ವಿವರ ಒದಗಿಸುವುದು),

ಆ) ಈ ವಿತರಣಾ ಜಾಲದಲ್ಲಿ ಅನೇಕ ಕಡೆಗಳಲ್ಲಿ ವೈಪುಗಳು ವದೆ ವದೆ ಒಡೆದು ನೀರು ಪೋಲಾಗುವುದಲ್ಲದೇ ಮತ್ತು ಇನ್ನೂ ಅನೇಕ ವಾರ್ಡ್ ಗಳ ಬಹುತೇಕ ಭಾಗಗಳಲ್ಲಿ ವಿತರಣಾ ಜಾಲವೇ ಇಲ್ಲದಿರುವುದರಿಂದ ನಾರ್ವಜನಿಕರಿಗೆ ತೊಂದರೆಗಳಾಗುತ್ತಿರುವುದು ನಿಜವಲ್ಲವೆ,

ಇ) ಈ ಮೂರು ನಗರಗಳಲ್ಲಿ ವಿತರಣಾ ವೈಪುಗಳನ್ನು ಯಾವಾಗ ಅಳವಡಿಸಿ ಜನರಿಗೆ ನೀರು ಕೊಡಲಾಗುವುದು,

ಈ) ಜಮಖಂಡಿ ನಗರದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಎಂದಿನಿಂದ ಪ್ರಾರಂಭಿಸಲಾಗಿದೆ ಹಾಗೂ ಗುತ್ತಿಗೆದಾರನ ಟೆಂಡರ್ ಅವಧಿ ಎಂದಿಗೆ ಮುಗಿದಿದೆ ಮತ್ತು ಯಾವಾಗ ಕೆಲಸವನ್ನು ಮುಗಿಸಿ ನೀರು ಕೊಡಲಾಗುವುದು, ಹಾಗೂ ಗುತ್ತಿಗೆದಾರನ ಟೆಂಡರ್ ಅವಧಿ ಎಂದಿಗೆ ಮುಗಿದಿದೆ ಮತ್ತು ಯಾವಾಗ ಕೆಲಸವನ್ನು ಮುಗಿಸಿ ನೀರು ಕೊಡಲಾಗುವುದು,